# 100 ದಿನದಲ್ಲಿ ಚಿತ್ರಣ ಬದಲಿಸುವೆ: ಸಿಎಂ

## ಸರ್ಕಾರದ 'ದಿನ ನೂರು; ಸಾಧನೆ ನೂರಾರು' ವರದಿ ಬಿಡುಗಡೆ | ನೆರೆ ಪರಿಹಾರ: ಅಧಿಕಾರಿಗಳಿಗೆ ಮೆಚ್ಚುಗೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 6/11/19

ಮುಂದಿನ ನೂರು ದಿನಗಳ ಆಡಳಿತದಲ್ಲಿ ರಾಜ್ಯದ ಅಭಿವೃದ್ಧಿಯ ಚಿತ್ರಣವನ್ನೇ ಬದಲಿಸಲಾಗುವುದು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಘೋಷಿಸಿದ್ದಾರೆ.

ಮಂಗಳವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರ್ಕಾರದ ಮೊದಲ ನೂರು ದಿನಗಳ ಪ್ರಗತಿಯನ್ನು ಒಳಗೊಂಡ 'ದಿನ ನೂರು; ಸಾಧನೆ ನೂರಾರು' ಎಂಬ ವರದಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಸರ್ಕಾರ ಅಸ್ತಿತ್ವಕ್ಕೆ ಬಂದು ನವೆಂಬರ್ 2ಕ್ಕೆ ಮೊದಲ ನೂರು ದಿನ ಪೂರ್ಣಗೊಳಿಸಿದೆ. ಈ ವೇಳೆ ಸರ್ಕಾರದ ಕಾರ್ಯನಿರ್ವಹಣೆಯ ಕುರಿತು, ಸಾಧನೆಗಳ ಮಾಹಿತಿ ಹೊಂದಿರುವ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲು ಸಂತೋಷ ಎನಿಸುತ್ತದೆ. ನಾವು ಅಧಿಕಾರಕ್ಕೆ ಬಂದಾಗ ಭ್ರಷ್ಟಾಚಾರ ಮುಕ್ತ, ರೈತರ ಪರ ಹಾಗೂ ಅಭಿವೃದ್ಧಿ ಕೇಂದ್ರಿತ ಆಡಳಿತ ನೀಡುತ್ತೇವೆ ಎಂಬ ನಿರ್ಧಾರ ಕೈಗೊಂಡಿದ್ದೆವು. ನಮ್ಮ ಸರ್ಕಾರದ ಆಶಯಗಳನ್ನು ಅವರಿಗೆ ಮನದಟ್ಟು ಮಾಡಿಕೊಟ್ಟಿದ್ದೆ. ಅಲ್ಪಾವಧಿಯಲ್ಲಿ ಆಶಯ ಈಡೇರುತ್ತಿದೆ ಎಂದರು.

ರಾಜ್ಯದಲ್ಲಿ ಪದೇ ಪದೇ ತಲೆದೋರಿದ ಪ್ರವಾಹ ಪರಿಸ್ಥಿತಿ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದ ಆದ್ಯತೆಗಳು ಬದಲಾದವು. ಆದರೆ ನಾಡಿನ ಜನರ ಹಿತ ಕಾಪಾಡುವ ನಮ್ಮ ಲಕ್ಷ್ಯ ಬದಲಾಗಿಲ್ಲ. ನೆರೆ ಪೀಡಿತ ಪ್ರದೇಶಗಳಲ್ಲಿ ಸಚಿವ ಸಂಪುಟದ ಎಲ್ಲ ಸಹೋದ್ಯೋಗಿಗಳು ಪ್ರವಾಸ ಕೈಗೊಂಡು ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ. ಪರಿಹಾರ ಕಾರ್ಯಗಳನ್ನು ಚುರುಕುಗೊಳಿಸಿದ್ದಾರೆ. ಅಧಿಕಾರಿಗಳೂ ಸಹ ಹಗಲು, ರಾತ್ರಿ ಎನ್ನದೆ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯದ ಹಣಕಾಸು ಪರಿಸ್ಥಿತಿ ಉತ್ತಮವಾಗಿದೆ ತೆರಿಗೆ ಸಂಗ್ರಹ ನಿಗದಿತ ಗುರಿಯಂತೆ ಆಗುತ್ತಿದೆ. ವಾಹನ ಖರೀದಿ ಕುಸಿದಿರುವ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯ ಸಾಧನೆಯಲ್ಲಿ ಸ್ವಲ್ಪ ಕೊರತೆ ಕಂಡುಬಂದಿದೆ. ಅದನ್ನು ಹೊರತುಪಡಿಸಿದರೆ ಇನ್ನುಳಿದ ವಾಣಿಜ್ಯ ತೆರಿಗೆ, ಅಬಕಾರಿ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ತೆರಿಗೆ ಸಂಗ್ರಹದ ಗುರಿ ಸಾಧನೆಯಾಗಿದೆ. ವಿತ್ತೀಯ ಶಿಸ್ತಿನ ಪಾಲನೆಯೂ ಆಗುತ್ತಿದೆ ಎಂದು ಮುಖ್ಯಮಂತ್ರಿಗಳು ಮಾಹಿತಿ ನೀಡಿದರು. ಈ ವೇಳೆ ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥನಾರಾಯಣ, ಸಚಿವರಾದ ಕೆ.ಎಸ್. ಈಶ್ವರಪ್ಪ, ಆರ್.ಅಶೋಕ್, ಬಸವರಾಜ ಬೊಮ್ಮಾಯಿ, ಸಿ.ಸಿ.ಪಾಟೀಲ್, ಜೆ.ಸಿ.ಮಾಧುಸ್ವಾಮಿ, ಕೋಟ ಶ್ರೀನಿವಾಸ ಪೂಜಾರಿ, ಪ್ರಭು ಚವ್ಹಾಣ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್ ಉಪಸ್ಥಿತರಿದ್ದರು.

## ಎಮ್ಮೆ, ಕೋಣದಿಂದ ಗುದ್ದಿಸಿಕೊಂಡು ಬರ್ತೀಯಾ!

**ಬೆಂಗಳೂರು:** ಎಮ್ಮೆ-ಕೋಣಗಳ ಬಳಿ ಗುದ್ದಿಸಿಕೊಂಡು ಬರುತ್ತೀಯಾ? ಬೊಕ್ಕೆ ಕೊಟ್ಟಾಯ್ತಲ್ಲಾ, ಸರಿ ಹೊರಡು...!

ಹೀಗೆಂದು ತಮ್ಮ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಸ್ಯ ಧಾಟಿಯಲ್ಲಿ ಹೇಳಿದ ಪ್ರಸಂಗ ವಿಧಾನಸೌಧದಲ್ಲಿ ಮಂಗಳವಾರ ನಡೆಯಿತು. ಸರ್ಕಾರ ನೂರು ದಿನ ಪೂರೈಸಿದ ಹಿನ್ನೆಲೆಯಲ್ಲಿ ರೇಣುಕಾಚಾರ್ಯ ಅವರು ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಲು ಹೂಗುಚ್ಛ ಹಿಡಿದು ನಿಂತಿದ್ದರು. ರೇಣುಕಾಚಾರ್ಯ ಅವರನ್ನು ನೋಡಿದ ಯಡಿಯೂರಪ್ಪ ಅವರು, ಕೊಡುವ ಹಾಗಿದ್ದರೆ ಬೊಕ್ಕೆ ಕೊಟ್ಟು ಹೋಗು. ಇಲ್ಲಿ ಎಲ್ಲರೂ ಊಟ ಮಾಡುತ್ತಿದ್ದಾರೆ. ಆಗಿನಿಂದ ಬೊಕ್ಕೆ ಹಿಡಿದುಕೊಂಡು ನಿಂತಿದ್ದೀಯಾ. ಎಮ್ಮೆ-ಕೋಣಗಳ ಕೈಲಿ ಗುದ್ದಿಸಿಕೊಂಡು ಬರುತ್ತೀಯಾ. ಬೊಕ್ಕೆ ಕೊಟ್ಟಾಯ್ತಲ್ಲಾ ಹೊರಡು ಎಂದು ತಮಾಷೆ ಮಾಡಿದರು. ಮುಖ್ಯಮಂತ್ರಿಗಳ ಮಾತಿನಿಂದ ಸುತ್ತಲಿದ್ದ ಮುಖಂಡರ ಮುಖದಲ್ಲಿ ನಗೆ



ಕಾಣಿಸಿಕೊಂಡಿತು.

ಇತ್ತೀಚೆಗೆ ನ್ಯಾಮತಿ ತಾಲೂಕಿನ ದೊಡ್ಡೇರಿ ಗ್ರಾಮದಲ್ಲಿ ರೇಣುಕಾಚಾರ್ಯ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ, ಹೋರಿಯೊಂದು ಅವರಿಗೆ ಗುದ್ದಿ ಬೀಳಿಸಿತ್ತು.